ಅಸಲು ದಾವಾ ಸಂಖ್ಯೆ 398/2019

ಫ್ರಾಸಾ-1

**ದಿನಾಂಕ 30.07.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಭೋಧಿಸಲಾಯಿತು.**

**ದಿಃ 24.06.2025 ರ ಆದೇಶದಂತೆ**

**ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ .ವೈ.ಆರ್.ಕೆ. ವಕೀಲರಿಂದಃ**

ನನಗೆ ದಿಃ01.05.1997 ರಲ್ಲಿ ಮದುವೆಯಾಗಿರುತ್ತದೆ. ಈ ಬಗ್ಗೆ ಯಾವುದೇ ದಾಖಲಾತಿ ಇರುವುದಿಲ್ಲ. ನನ್ನನ್ನು ಪಾದೆ ಮನೆ, ಚಾರ್ಮಾಡಿ ಗ್ರಾಮದ ಧರ್ಮಣ್ಣ ಪೂಜಾರಿರವರಿಗೆ ಮದುವೆ ಮಾಡಿ ಕೊಟ್ಟಿರುತ್ತಾರೆ. ನನ್ನ ತಂದೆಯ ಹೆಸರು ಚೇಂಕ್ರ ಪೂಜಾರಿ. ವಾದಿಗೆ ಒಟ್ಟು 5 ಜನ ಮಕ್ಕಳಿರುತ್ತಾರೆ. ಆನಂದ ಮತ್ತು ಗೀತಾ ರವರು ಕೂಡಾ ವಾದಿಯ ಮಕ್ಕಳು ಎಂದರೆ ಸರಿ. ಅವರು ಈಗ ತೀರಿಹೋಗಿರುತ್ತಾರೆ. ಇವರು ಸೇರಿ ವಾದಿಯವರಿಗೆ ಒಟ್ಟು 7 ಜನ ಮಕ್ಕಳಿರುತ್ತಾರೆ. ತೀರಿಹೋದ ಮಕ್ಕಳ ಪೈಕಿ ಆನಂದ ಹಿರಿಯ ಮಗ ಮತ್ತು ಗೀತಾ ಕಿರಿಯ ಮಗಳು ಎಂದರೆ ಸರಿ. ಆನಂದ ಮತ್ತು ಗೀತಾ ಎಂಬ ವಾದಿಯ ಮಕ್ಕಳು ಹೇಗೆ ತೀರಿಹೋದರು ಎಂಬ ಬಗ್ಗೆ ನನಗೆ ಗೊತ್ತಿರುವುದಿಲ್ಲ. ಆನಂದ ನನ್ನ ಅಣ್ಣ ಅವರು ವಿಷ ಸೇವಿಸಿ ಮನೆಯಲ್ಲಿ ಆತ್ಮಹತ್ಯೆ ಮಾಡಿಕೊಂಡಿರುತ್ತಾರೆ ಎಂದರೆ ಆಗಿರಬಹುದು ಎನ್ನುತ್ತಾರೆ. ಗೀತಾ ಎಂಬುವವರು ಕೆರೆಗೆ ಬಿದ್ದು ಮರಣ ಹೊಂದಿದ ಬಗ್ಗೆ ವೇಣೂರು ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದೆ ಎಂದರೆ ಸರಿ. ಸದರಿ ದೂರಿನಲ್ಲಿ ಏನು ಬರೆಯಲಾಗಿದೆ ಎಂದು ನನಗೆ ಗೊತ್ತಿರುವುದಿಲ್ಲ.

ಸುಂದರ ಎಂಬುವವರು ವಾದಿಯ ಮತ್ತೊಬ್ಬ ಮಗ ಹಾಗೂ ನನ್ನ ಅಣ್ಣ ಎಂದರೆ ಸರಿ. ಗೀತಾ ರವರು ಮೃತಪಟ್ಟ ಸಮಯದಲ್ಲಿ ನಾನು ಹೆರಿಗೆಗೆ ಬಂದು ನನ್ನ ತವರು ಮನೆಯಲ್ಲಿಯೇ ಇದ್ದೆ ಎಂದರೆ ಸರಿ. ಗೀತಾ ಎಂಬುವವರು ಕಾಲು ಜಾರಿ ನದಿಗೆ ಬಿದ್ದಿರುವುದಿಲ್ಲ, ಅವರನ್ನು ನನ್ನ ಸಹೋದರನಾದ ಸುಂದರ ಎಂಬುವವರು ಹೊಡೆದು ಕೊಲೆ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಹೊಸಂಗಡಿ ಗ್ರಾಮಕ್ಕೆ ಯಕ್ಷಗಾನ ನೋಡಲು ಹೋದಾಗ ಅಲ್ಲಿ ಗೀತಾರವರು ಬೇರೆ ಒಬ್ಬ ಹುಡುಗನ ಜೊತೆ ಮಾತನಾಡಿದರು ಎಂಬ ಕಾರಣಕ್ಕೆ ನನ್ನ ಸಹೋದರನಾದ ಸುಂದರರವರು ಗೀತಾ ರವರನ್ನು ಹೊಡೆದು ಕೊಲೆ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಈ ವಿಚಾರದ ಬಗ್ಗೆ

ಅಂದಿನ ದಿನಪತ್ರಿಕೆಗಳಲ್ಲಿ ವರದಿಯಾಗಿರುತ್ತದೆ ಎಂದರೆ ಸರಿಯಲ್ಲ. ಪತ್ರಿಕೆಗಳಲ್ಲಿ ವರದಿಯಾದ ಬಗ್ಗೆ ನನಗೆ ಗೊತ್ತಿರುವುದಿಲ್ಲ. ಗೀತಾರವರು ಮರಣ ಹೊಂದಿದ ಸಮಯದಲ್ಲಿ ನನಗೆ ಜನಿಸಿದ್ದ ಮಗುವು ಸಹ ತೀರಿಹೋಗಿರುತ್ತದೆ ಎಂದರೆ ಸರಿ.

ಪ್ರತಿವಾದಿಯವರನ್ನು ನನ್ನ ತಮ್ಮನಾದ ಸತೀಶರವರಿಗೆ ಮದುವೆ ಮಾಡಿಕೊಟ್ಟಿರುವ ವಿಚಾರ ನನಗೆ ಗೊತ್ತಿರುವುದಿಲ್ಲ. ಪ್ರತಿವಾದಿ ಮತ್ತು ನನ್ನ ತಮ್ಮ ಸತೀಶ ಈಗ ಹೇಗೆ ಸಂಸಾರ ನಡೆಸುತ್ತಿದ್ದಾರೆ ಎಂಬ ಬಗ್ಗೆ ನನಗೆ ಗೊತ್ತಿರುವುದಿಲ್ಲ. ನನ್ನ ತಮ್ಮ ಸತೀಶ ಪ್ರತಿವಾದಿಗೆ ವಿಚ್ಛೇದನೆ ನೀಡದೆ ಮತ್ತೊಂದು ಮದುವೆಯಾಗಿರುತ್ತಾರೆ ಎಂದರೆ ಸರಿಯಲ್ಲ. ನನಗೆ ಓದಲು ಮತ್ತು ಬರೆಯಲು ಕಣ್ಣುಗಳು ಕಾಣುವುದಿಲ್ಲ. ನಾನು ವಾದಿಯ ಪರವಾಗಿ ಸಾಕ್ಷ್ಯ ಹೇಳಲು ಬಂದಿರುತ್ತೇನೆ. ವಾದ ಪತ್ರ ಮತ್ತು ಪ್ರಮಾಣ ಪತ್ರದಲ್ಲಿ ಇರುವ ವಿಚಾರಗಳು ಗೊತ್ತಾ ಎಂದರೆ ಸಾಕ್ಷಿಯು ತಿಳಿದಿರುತ್ತದೆ ಎನ್ನುತ್ತಾರೆ. ನನ್ನ ತಂದೆಯವರು ವಕೀಲರಿಗೆ ಮಾಹಿತಿ ನೀಡಿದ್ದು, ನಂತರ ನನಗೂ ಸಹ ಸದರಿ ವಿಚಾರಗಳ ಬಗ್ಗೆ ಹೇಳಿರುತ್ತಾರೆ. ಈ ದಾವೆಯನ್ನು ಸಲ್ಲಿಸುವ ಸಮಯದಲ್ಲಿ ವಾದಿಗೆ 90 ವರ್ಷ ವಯಸ್ಸಾಗಿರಬಹುದು. ಇದೇ ನ್ಯಾಯಾಲಯದಲ್ಲಿ ಈ ಹಿಂದೆ ಇತ್ಯರ್ಥವಾಗಿರುವ ಅಪರಾದಿಕ ಪ್ರಕರಣದಲ್ಲಿ ವಾದಿಯು ಸಾಕ್ಷ್ಯ ಹೇಳಲು ವೀಲ್ ಚೇರ್ ನಲ್ಲಿ ಬರುತ್ತಿದ್ದರು ಎಂದರೆ ಸರಿ. ನಮ್ಮ ವಕೀಲರ ಕಚೇರಿ ಮೊದಲನೆ ಮಹಡಿಯಲ್ಲಿದ್ದು, ಸದರಿ ಕಚೇರಿಗೆ ವಾದಿಯು ವೀಲ್ ಚೇರ್ ನಲ್ಲಿ ಹೋಗಲು ಸಾಧ್ಯವಿಲ್ಲ ಎಂದರೆ ಸಾಕ್ಷಿಯು ವಾದಿಯು ಮೊದಲು ಕಚೇರಿಗೆ ಹೋಗುತ್ತಿದ್ದರು ಆದರೆ ನಂತರ ದಿನಗಳಲ್ಲಿ ವಕೀಲರೆ ಕೆಳಗಡೆ ಬಂದು ಅವರ ಸಹಿ ಪಡೆದಿರುತ್ತಾರೆ. ಈ ದಾವೆ ಹೂಡಿದ 2019 ನೇ ವರ್ಷದಲ್ಲಿ ವಾದಿಯು ಮೊದಲನೆ ಮಹಡಿಯಲ್ಲಿರುವ ವಕೀಲರ ಕಚೇರಿಗೆ ಹೋಗುತ್ತಿದ್ದರು. ವಾದಿಯವರಿಗೆ ಈಗಲೂ ಸಹ ಕಣ್ಣುಗಳು ಕಾಣುತ್ತವೆ. ನನಗೆ ಕನ್ನಡ ಧರಿಸಿದರೂ ಸಹ ಸರಿಯಾಗಿ ಕಣ್ಣು ಕಾಣುವುದಿಲ್ಲ. 2021 ರಿಂದ ನಾನು ನನ್ನ ತವರು ಮನೆಯಲ್ಲಿದ್ದು ಗಂಡನ ಮನೆಗೆ ಹೋಗಿ ಬರುತ್ತಾ ಇರುತ್ತೇನೆ.

ಫ್ರಾಸಾ-1

ನನ್ನ ಗಂಡ ಸುಮಾರು ಎರಡೂವರೆ ವರ್ಷಗಳ ಹಿಂದೆ ಜನವರಿ ತಿಂಗಳಿನಲ್ಲಿ ಕಾಲು ಜಾರಿ ಚಾರ್ಮಡಿಯ ಹೊಳೆಗೆ ಬಿದ್ದು ಮೃತಪಟ್ಟಿರುತ್ತಾರೆ. ಅದು ಸಣ್ಣ ಹೊಳೆ ಎಂದರೆ ಸಾಕ್ಷಿಯು ತುಂಬಾ ನೀರು ಬರುವ ದೊಡ್ಡ ಹೊಳೆ ಎನ್ನುತ್ತಾರೆ. ಜನವರಿ ತಿಂಗಳಿನಲ್ಲಿ ಸದರಿ ಚಾರ್ಮಡಿ ಹೊಳೆಯಲ್ಲಿ ಬಿದ್ದು ಸಾಯುವಷ್ಟು ನೀರು ಇರುವುದಿಲ್ಲ ಎಂದರೆ ಸಾಕ್ಷಿಯು ಘಟ್ಟದಲ್ಲಿ ಮಳೆ ಬಂದರೆ ಹೊಳೆಗೆ ನೀರು ಬರುತ್ತದೆ ಎನ್ನುತ್ತಾರೆ. ಜನವರಿ ತಿಂಗಳಿನಲ್ಲಿ ಘಟ್ಟದಲ್ಲಿಯೂ ಸಹ ಮಳೆ ಬರುವುದಿಲ್ಲ ಎಂದರೆ ಸಾಕ್ಷಿಯು ಒಮ್ಮೊಮ್ಮೆ ಬರುತ್ತದೆ ಎನ್ನುತ್ತಾರೆ.

(ಈ ಹಂತದಲ್ಲಿ ಪ್ರತಿವಾದಿ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು ಮುಂದೂಡಲಾಯಿತು)

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾದಂ.ಗಳು ಬೆಳ್ತಂಗಡಿ

(ಸಾ.ಓ.ಹೇ.ಕೇ.ಸ.ಇ.ಎ.ಒ)